## ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.542/2023

| | | |
|---|---|---|
| ಸಾಕ್ಷಿದಾರರ ಹೆಸರು | – ಕರಿಯಪ್ಪ | ಸಿಡಬ್ಲ್ಯೂ-6 |
| ತಂದೆಯ ಹೆಸರು | – ರಾಮಯ್ಯ | ಪಿಡಬ್ಲ್ಯೂ-2 |
| ವಯಸ್ಸು | – 50 ವರ್ಷ | |
| ಉದ್ಯೋಗ | – ವ್ಯವಸಾಯ | |
| ವಾಸ | – ಬಳಘಟ್ಟ ಗ್ರಾಮ | |

**ದಿನಾಂಕಃ 18.03.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ಚಾಸಾ.7 ಮತ್ತು 10 ರವರು ನನಗೆ ಗೊತ್ತಿಲ್ಲ. ಸಾಕ್ಷಿ ಮಹಜರ್ ಮತ್ತು ಕಚ್ಚಾ ನಕಾಶೆಯಲ್ಲಿರುವ ಸಹಿ ನೋಡಿ ಗುರುತಿಸಿದ್ದು ಮಹಜರನ್ನು ನಿಪಿ-6 ಎಂದು ಸಹಿಯನ್ನು 6 ಎ ಎಂದು ಕಚ್ಚಾ ನಕಾಶೆಯನ್ನು ನಿಪಿ-7 ಎಂದು ಸಹಿಯನ್ನು ನಿಪಿ-7 ಎ ಎಂದು ಗುರುತಿಸಲಾಯಿತು. ವಿ ವಿ ಪುರ ಬಸ್ ಸ್ಟಾಂಡ್ ಬಳಿ 2 ವರ್ಷಗಳ ಹಿಂದೆ ಸಹಿ ಮಾಡಿದ್ದೇನೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಕ್ರಮ ಜರುಗಿಸಿಲ್ಲ, ಯಾವುದೇ ವಾಹನ ಅಮಾನತ್ತು ಪಡಿಸಿಕೊಂಡಿಲ್ಲ. ಅಪಘಾತವಾಗಿದೆ ಎಂದು ಹೇಳಿ ಪೊಲೀಸರು ಪೋಟೋ ತೆಗೆದಿರುತ್ತಾರೆ. ಸದರಿ ಪೋಟೋ ಸಾಕ್ಷಿ ನೋಡಿ ಗುರುತಿಸಿದ್ದರಿಂದ ಪೋಟೋವನ್ನು ನಿಪಿ-8 ಮತ್ತು ಸಿಡಿ ಯನ್ನು ನಿಪಿ-9 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ದಿಃ10.02.2023 ರಂದು ಪೊಲೀಸರು ಬೆಳಿಗ್ಗೆ 8 ರಿಂದ 8.45 ರ ಸಮಯದಲ್ಲಿ ವಾಣಿ

ವಿಲಾಸ ಗ್ರಾಮದ ಬಳಿ ಇರುವ ಹಳೇ ಬಿ ಎಸ್ ಎನ್ ಎಲ್ ಟೆಲಿಫೋನ್ ಆಫೀಸ್ ಮುಂದಿನ ವಿ ವಿ ಪುರದಿಂದ ಹಿರಿಯೂರು ಕಡೆಗೆ ಹಾದುಹೋಗಿರುವ ಟಾರ್ ರಸ್ತೆಯಲ್ಲಿ ಪೊಲೀಸರು ಮೋಟರ್ ಸೈಕಲ್ ಕೆಎ 17 ಎಸ್ 9989 ಮತ್ತು ಟಿ ವಿ ಎಸ್ ಅಪೆ ಆರ್ ಟಿ ಆರ್ 160 ಕೆ ಎ 16 ಇಪಿ 4245 ನ್ನು ವಶಪಡಿಸಿಕೊಂಡು ನನ್ನ ಮತ್ತು ಚಾಸಾ.7 ಮತ್ತು 10 ರವರ ಸಮಕ್ಷಮ ಪಂಚನಾಮೆ ಬರೆದು ಕಚ್ಚಾ ನಕಾಶೆ ತಯಾರಿಸಿ ನಮ್ಮ ಸಹಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಆರ್ ಟಿ ಎಸ್ ವಕೀಲರಿಂದ–ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು